# GATWU - ಏವರಿ ಡೆನಿಸನ್ (ಇಂಡಿಯಾ) ಪ್ರೈ.ಲಿ ಬ್ರಾಂಚ್ ಯೂನಿಯನ್

ಆತ್ಮೀಯ ಸಂಗಾತಿಗಳೇ,

ಏವರಿ ಡೆನಿಸನ್ ಕಾರ್ಪೊರೇಷನ್ ಒಂದು ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಯಾಗಿದೆ. ಈ ಕಂಪನಿಯು ಪ್ರಪಂಚದಾದ್ಯಂತ 50 ಕ್ಕೂ ಹೆಚ್ಚು ಉತ್ಪಾದನಾ ಘಟಕಗಳನ್ನು ಹೊಂದಿದ್ದು 275 ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 30,000 ಕಾರ್ಮಿಕರು ದುಡಿಯುತ್ತಿದ್ದಾರೆ. 2017 ರಲ್ಲಿ ಈ ಕಂಪನಿಯ ಒಟ್ಟಾರೆ ವಾರ್ಷಿಕ ವ್ಯವಹಾರ 6.6 ಬಿಲಿಯನ್ ಡಾಲರ್ ಅಂದರೆ ಸುಮಾರು 40 ಸಾವಿರ ಕೋಟಿ, ಮತ್ತು 2017 ರಲ್ಲಿ ಈ ಕಂಪನಿಯ ಲಾಭ 281 ಮಿಲಿಯನ್ ಡಾಲರ್ ಅಂದರೆ ಸುಮಾರು 2000 ಕೋಟಿ.

ಇಂಥಹ ಪ್ರತಿಷ್ಠಿತ ಕಂಪನಿಯು ಭಾರತದಲ್ಲಿ ಏವರಿ ಡೆನಿಸನ್ (ಇಂಡಿಯಾ) ಪ್ರೈ.ಲಿ ಎಂಬ ಹೆಸರಿನಲ್ಲಿ ಮೂರು ಉತ್ಪಾದನ ಘಟಕಗಳನ್ನು ಹೊಂದಿದೆ. ಮುಖ್ಯವಾಗಿ ಏವರಿ ಡೆನಿಸನ್ ಇಂಡಿಯಾ ಪ್ರೈ.ಲಿ ಉಡುಪು ಮತ್ತು ಶೂ ಉದ್ಯಮಕ್ಕೆ ಬೇಕಾಗುವ ಲೇಬಲ್‌ಗಳು ಮತ್ತು ಟ್ಯಾಗ್‌ಗಳು, price ticket ಗಳ ಮುದ್ರಣ ಮತ್ತು RFID ಯನ್ನು ಸರಬರಾಜು ಮಾಡುತ್ತದೆ.

**ಭಾರತದಲ್ಲಿ ಏವರಿ ಡೆನಿಸನ್ (ಇಂಡಿಯಾ) ಪ್ರೈ.ಲಿ ಕಂಪನಿಯ total revenue ಕ್ರಮವಾಗಿ 2014–15 ರಲ್ಲಿ ರೂ. 1,253,85,59,259 ; 2015–16 ರಲ್ಲಿ ರೂ. 1,425,63,17,164 ; 2016–17 ರಲ್ಲಿ ರೂ. 1,744,92,03,216 ವ್ಯವಹಾರವನ್ನು ಮಾಡಿ ಕ್ರಮವಾಗಿ ತೆರಿಗೆಯ ನಂತರ ರೂ. 8,60,07,994 ರೂ. 31,41,27,933 ಮತ್ತು ರೂ. 51,51,19,659 ಲಾಭವನ್ನು ಗಳಿಸಿದೆ ಮತ್ತು ತನ್ನ ವಾರ್ಷಿಕ ವ್ಯವಹಾರದಲ್ಲಿ ಗಣನೀಯ ಹೆಚ್ಚಳವನ್ನು ಸಾಧಿಸಿದೆ. 2015–16 ರಲ್ಲಿ ವಾರ್ಷಿಕ ವ್ಯವಹಾರದಲ್ಲಿ 13% ಹೆಚ್ಚಳವಾಗಿದೆ. ತೆರಿಗೆ ಪೂರ್ವ ಲಾಭವು 103% ಹೆಚ್ಚಳವಾಗಿದೆ. 2016–17 ರ ವಾರ್ಷಿಕ ವ್ಯವಹಾರದಲ್ಲಿ 20% ಹೆಚ್ಚಳವಾಗಿದ್ದು ತೆರಿಗೆ ಪೂರ್ವ ಲಾಭ 64% ಹೆಚ್ಚಳವಾಗಿದೆ.**

ಸಂಗಾತಿಗಳೇ ತಾವೆಲ್ಲರೂ ಗಮನಿಸಬೇಕಾದ ಅಂಶವೆಂದರೆ ಮೇಲಿನ ಅಂಕಿಅಂಶಗಳೆಲ್ಲವೂ ಏವರಿ ಡೆನಿಸನ್ (ಇಂಡಿಯಾ) ಪ್ರೈ.ಲಿ ಸಂಸ್ಥೆಯು ತಾನೇ ಘೋಷಿಸಿಕೊಂಡಿರುವ ಮತ್ತು ಭಾರತ ಸರ್ಕಾರಕ್ಕೆ (ROC) ಸಲ್ಲಿಸಿರುವ ಅಧಿಕೃತ ದಾಖಲೆಯಾಗಿದೆ. ಮತ್ತು ಇದು ನಮ್ಮೆಲ್ಲರ ಶ್ರಮದ ಫಲವಾಗಿದೆ.

ಸಂಗಾತಿಗಳೇ ನಿಮಗೆಲ್ಲ ಗೊತ್ತು ನಾವು 6 ವರ್ಷಗಳಿಂದ ಸಂಘಟನೆಯೊಂದರ ಅಡಿಯಲ್ಲಿ ಸಂಘಟಿತರಾಗಿದ್ದೆವು, ಆದರೆ ಆ ಯೂನಿಯನ್ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡದೇ, ಕಾರ್ಮಿಕರ ಶ್ರಮದ ಬೆವರ ಪಾಲನ್ನು ಆಡಳಿತವರ್ಗದಿಂದ ಪಡೆಯಲು ಯಾವುದೇ ಹೋರಾಟ ನಡೆಸದೇ, ಇಲ್ಲಿಯವರೆಗೂ ನಿಷ್ಕ್ರಿಯವಾಗಿತ್ತು.

ಇತ್ತೀಚೆಗೆ ನಾವು ಜಾಗೃತರಾಗಿ ಪ್ರಶ್ನಿಸತೊಡಗಿದಾಗ, ಇಲ್ಲಿಯವರೆಗೂ ನಿಷ್ಕ್ರಿಯವಾಗಿದ್ದ ಯೂನಿಯನ್ ನಾಯಕರು ಈಗ ಎಚ್ಚೆತ್ತು, ನಾವು ಪ್ರಶ್ನೆ ಮಾಡುತ್ತಿರುವುದನ್ನೇ ತಪ್ಪು ಎಂದು ಸಾಧಿಸ ಹೊರಟಿದ್ದಾರೆ. ಅದಕ್ಕಾಗಿ ಕಾರ್ಮಿಕರ ಮೇಲೆ ಹಲ್ಲೆ ನಡೆಸುವಂತಹ ಹೀನ ಕೃತ್ಯಕ್ಕೂ ಕೈ ಹಾಕಿದ್ದಾರೆ.

ಸಂಗಾತಿಗಳೇ, ಇದೆಲ್ಲದರ ಹಿನ್ನೆಲೆಯಲ್ಲಿ ನಮಗೆ ನಾವೇ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ.

- ಏವರಿ ಡೆನಿಸನ್ ಕಂಪನಿಯ ಇಷ್ಟೆಲ್ಲಾ ಲಾಭದಲ್ಲೂ ನಡೆಯುತ್ತಿದ್ದರೂ, ಈ ಮೇಲಿನ ಅಂಕಿ ಅಂಶಗಳನ್ನು ಇಲ್ಲಿಯವರೆಗೂ ನಮಗೆ ಯಾರಾದರೂ ತಿಳಿಸಿದ್ದರೇ?
- ಲಾಭದಲ್ಲಿ ನಡೆಯುತ್ತಿರುವ ಕಂಪನಿಯನ್ನು ನಷ್ಟದಲ್ಲಿ ನಡೆಯುತ್ತಿದೆ ಎಂದು ನಮ್ಮನ್ನು ನಂಬಿಸಿ, ನಾವು ಯಾವುದಕ್ಕೂ ಧ್ವನಿಯೆತ್ತದಂತೆ ಮಾಡಿದ್ದವರು ಯಾರು?
- ಪ್ರತಿವರ್ಷ ಲಾಭ ನಷ್ಟದ ಪಟ್ಟಿಯನ್ನು ಯೂನಿಯನ್‌ಗೆ ತೋರಿಸ ಬೇಕಾಗಿರುವುದು ಕಂಪನಿಯ ಕರ್ತವ್ಯ, ಅವರು ತೋರಿಸದಿದ್ದಲ್ಲಿ, ಅದನ್ನು ಆಗ್ರಹಿಸಿ ತೆಗೆದುಕೊಳ್ಳುವುದು ಯೂನಿಯನ್ ಕರ್ತವ್ಯ. ಇಲ್ಲಿಯವರೆಗೂ ಇದನ್ನು ನಮಗೆ ಎಂದಾದರೂ ತೋರಿಸಿದ್ದಾರಾ?
- ಲಾಭಂಶ ಹಂಚಿಕೆ ಬೋನಸ್‌ಗಾಗಿ ಆಗ್ರಹಿಸುವುದು ಯಾವುದೇ ಯೂನಿಯನ್ ನ ಕರ್ತವ್ಯ. ಆದರೆ ಏವರಿ ಡೆನಿಸನ್ ಕಂಪನಿಯು ಇಷ್ಟೆಲ್ಲ ಲಾಭ ಮಾಡಿದ್ದರು ಪ್ರಾಫಿಟ್ ಶೇರ್ ಬೋನಸ್‌ಗಾಗಿ ಆಗ್ರಹಿಸಲಿಲ್ಲ?
- ಯೂನಿಯನ್ ಗೆ ಸೇರಿ 6 ವರ್ಷವಾದರೂ ನಮಗೆ ಯಾರಿಗಾದರೂ ಒಂದಾದರೂ ಕಾರ್ಮಿಕ ಕಾನೂನು ತಿಳಿದಿದದೆಯೇ? ತಿಳಿಸುವ ಜವಾಬ್ದಾರಿ ಯಾರದಿತ್ತು?

Scanned with OKEN Scanner

- ಕಾರ್ಮಿಕರಿಗೆ ಕಾನೂನು ತಿಳುವಳಿಕೆ ಬಂದರೆ ಕಾರ್ಮಿಕ ನಾಯಕರನ್ನು ಪ್ರಶ್ನಿಸುತ್ತಾರೆ ಎಂದು ಕಾರ್ಮಿಕರ ಮುಗ್ಧತೆಯನ್ನು ಇಷ್ಟು ವರ್ಷ ದುರುಪಯೋಗ ಪಡಿಸಿಕೊಂಡವರು ಯಾರು?
- ಕಾರ್ಮಿಕರನ್ನು ಸಣ್ಣ ಪುಟ್ಟ ತಪ್ಪುಗಳಿಗೆ ಅಮಾನತ್ತು ಮಾಡಿದರೆ ಅದರ ವಿರುದ್ಧ ಯಾವುದೇ ರೀತಿ ಕಾನೂನು ಬದ್ಧ ಹೋರಾಟ ನಡೆಸದೇ ಆಡಳಿತವರ್ಗದೊಂದಿಗೆ ಮೌಖಿಕವಾಗಿ ವ್ಯವಹಾರ ನಡೆಸುತ್ತ ಕಾರ್ಮಿಕರಿಗೆ ವಂಚಿಸುತ್ತಿದ್ದವರು ಯಾರು?.
- ಯಾವುದೇ ಕಾನೂನು ತಿಳುವಳಿಕೆ ಇಲ್ಲದಂತಹ ಸಂದರ್ಭದಲ್ಲಿ ಮಾಡಿದ COB ಅನ್ನೇ ಈಗಲೂ ಮುಂದುವರೆಸುತ್ತಾ ಹಿಂದಿನವರ ಮೇಲೆ ತಪ್ಪು ಹಾಕುವುದು ಸರಿಯೇ?.
- 2018 ರ ಏಪ್ರಿಲ್‌ನಿಂದ ಆಡಳಿತವರ್ಗದವರು ಕಾರ್ಮಿಕರ ವೇತನದಲ್ಲಿ ಬೇರೆ ಬೇರೆ ಭತ್ಯೆಗಳನ್ನು ಕಾನೂನು ಬಾಹಿರವಾಗಿ ಕಡಿತಗೊಳಿಸಿದಾಗ ಆ ಕ್ರಮ ಸರಿಯೆಂದು ಬಹಿರಂಗವಾಗಿ ಹೇಳಿದವರು ಯಾರು?
- ಇಲ್ಲಿ ತಯಾರಾಗುವ ವಸ್ತುಗಳು ಯಕಃಶ್ಚಿತ್ 50 ಪೈಸೆಯದ್ದು, ಇದನ್ನು ಫುಟ್‌ಪಾತ್‌ನಲ್ಲಿಯೂ ತಯಾರಿಸಬಹುದು ಎಂದು ಕಾರ್ಮಿಕರ ಬಾಯಿ ಮುಚ್ಚಿಸಿದ್ದವರು ಯಾರು? ಕಂಪನಿಯು ಸಾವಿರಾರು ಕೋಟಿ ವ್ಯವಹಾರ ಮಾಡುತ್ತಿದ್ದುದು ಅವರಿಗೆ ತಿಳಿದಿರಲಿಲ್ಲವೇ?
- ಕೊಡುತ್ತಿರುವ ವೇತನವೇ ಅತೀ ಹೆಚ್ಚು ಎಂದು ಹೇಳಿ ಬೇರೆಲ್ಲೂ ಇಷ್ಟು ವೇತನ ಸಿಗುವುದಿಲ್ಲ, ಹೆಚ್ಚು ವೇತನ ಕೇಳಿದರೆ ಕಂಪನಿ ಮುಚ್ಚುತ್ತದೆ ಎಂದು ಕಾರ್ಮಿಕರಿಗೆ ಭಯ ಬೀಳಿಸುತ್ತಿದ್ದವರು ಯಾರು?.
- ನಮ್ಮ ಸಹೋದ್ಯೋಗಿಗಳಲ್ಲಿ ಸುಮಾರು 150 ಕ್ಕಿಂತಲೂ ಹೆಚ್ಚು ಮಹಿಳೆಯರಿದ್ದು, ಈ ಮಹಿಳಾ ಕಾರ್ಮಿಕರನ್ನು ಸಂಘಟಿಸದೇ ಲಿಂಗ ತಾರತಮ್ಯ ಮಾಡಿದ್ದು ಯಾಕೆ?
- ಈ ಕಂಪನಿಯಲ್ಲಿ ಕೈಗಾರಿಕಾ ವ್ಯಾಜ್ಯ ಕಾಯಿದೆಯ ಅಡಿಯಲ್ಲಿ 600 ಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದರೂ ಈ ಯೂನಿಯನ್ ಕೇವಲ 350 ಕಾರ್ಮಿಕರಿಗೆ ಮಾತ್ರ COB ಯನ್ನು ಮಾಡಿಕೊಂಡಿತ್ತು ಏಕೆ? ಉಳಿದವರು ಏನು ತಪ್ಪು ಮಾಡಿದ್ದರು?
- ಕಂಪನಿಯು 1970 ರ ಗುತ್ತಿಗೆ ಕಾರ್ಮಿಕರ ನಿರ್ಮೂಲನೆ ಮತ್ತು ನಿಯಂತ್ರಣ ಕಾಯಿದೆಯನ್ನು ಸ್ಪಷ್ಟ ಉಲ್ಲಂಘನೆ ಮಾಡುತ್ತಿದ್ದು, ನಮ್ಮ ಅಣ್ಣತಮ್ಮಂದಿರಾದ ಗುತ್ತಿಗೆ ಕಾರ್ಮಿಕರು ಅನ್ಯಾಯಕ್ಕೊಳಗಾಗುತ್ತಿದ್ದರೂ ಅವರ ಬಗ್ಗೆ ಯಾವುದೇ ಕಾಳಜಿ ತೋರದೆ ಸುಮ್ಮನಿದ್ದವರು ಯಾರು?.
- ಕಂಪನಿಯು 'ನಮ್ಮದು ಪ್ರಿಂಟಿಂಗ್ ಇಂಡಸ್ಟ್ರಿ ಅಲ್ಲ' ಎಂದು ಪದೇ ಪದೇ ಹೇಳುತ್ತಿದೆ. ಆದರೆ ಭಾರತ ಸರ್ಕಾರದ ಕೈಗಾರಿಕಾ ವರ್ಗೀಕರಣದದಲ್ಲಿ ವಿವರಿಸಿರುವ ಪ್ರಕಾರ ಎವೆರಿ ಡೆನಿಸನ್ ಬೆಂಗಳೂರಿನ ಕಾರ್ಖಾನೆಯು ನಡೆಸುವ ಎಲ್ಲ ಕಾರ್ಯಚಟುವಟಿಕೆಗಳು ಪ್ರಿಂಟಿಂಗ್ ಇಂಡಸ್ಟ್ರೀ ಅಡಿಯಲ್ಲಿ ಬರುತ್ತದೆ. ಇದು ಈ ಯೂನಿಯನ್‌ಗೆ ತಿಳಿದಿಲ್ಲವೇ? ಅದನ್ನು ಪ್ರಶ್ನಿಸದೆ ಏಕೆ ಸುಮ್ಮನಿದ್ದರು?
- ಯಾವುದೇ ಯೂನಿಯನ್ ಕಾರ್ಮಿಕರ ಹಿತಾಸಕ್ತಿಗಾಗಿ ಹಾಗೂ ಅವರ ಏಳಿಗೆಗಾಗಿ ಶ್ರಮಿಸುತ್ತಾ ಅವರಿಗೆ ಎಲ್ಲ ರೀತಿಯ ಅರಿವು ಮೂಡಿಸುತ್ತ, ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. **ಆದರೆ ನಮ್ಮಲ್ಲಿ ಈ ಕೆಲಸ ಆಗಿದೆಯೇ?**

ಸಂಗಾತಿಗಳೇ ಗಮನಿಸಿ, ಕಾರ್ಮಿಕರ ಹಿತ ಕಾಯಬೇಕಾದವರೇ ಆಡಳಿತವರ್ಗದ ಪರವಾಗಿ ವ್ಯವಹರಿಸಿ ಅವರ ಕಾನೂನು ಬಾಹಿರ ಕ್ರಮಗಳನ್ನು ಸಮರ್ಥಿಸುತ್ತಾ, ಒಳ ಒಪ್ಪಂದವನ್ನು ಮಾಡಿಕೊಂಡು ಕಾರ್ಮಿಕರಿಗೆ ನ್ಯಾಯವಾಗಿ, ಕಾನೂನು ಬದ್ಧವಾಗಿ ಸಿಗಬೇಕಾಗಿರುವ ಸವಲತ್ತುಗಳನ್ನು ವಂಚಿಸುತ್ತಿರುವುದೂ ಅಲ್ಲದೇ, ನಾವು ಈಗ ಜಾಗೃತರಾದಾಗ, ಈ ನಾಯಕರು **"ನ್ಯಾಯ, ನೀತಿ, ಧರ್ಮ, ಪಟ್ಟಭದ್ರ ಹಿತಾಸಕ್ತಿಗಳು, ಹೊರಗಿನವರು"** ಎಂಬ ದೊಡ್ಡ ದೊಡ್ಡ ಪದಗಳನ್ನು ಬಳಸುತ್ತಾ ನಮ್ಮಲ್ಲಿ ಭಯ ಹುಟ್ಟಿಸಲು ಯತ್ನಿಸುತ್ತಿದ್ದಾರೆ. ಆದರೆ ಇವರು ಬಳಸುತ್ತಿರುವ ನ್ಯಾಯ ನೀತಿ ಧರ್ಮ ಎಂಬ ಪದಗಳು ಕೇವಲ ಪದಗಳಾಗದೇ ಅನುಷ್ಠಾನಕ್ಕೆ ಬರಬೇಕೆಂಬುದು ನಮ್ಮೆಲ್ಲರ ಆಶಯ.

ನಮ್ಮ ಪ್ರಶ್ನೆಗಳು ಇಲ್ಲಿಗೇ ಮುಗಿದಿಲ್ಲ, ಇನ್ನೂ ಮುಂದುವರೆಯುತ್ತವೆ. . . .

ಕಾರ್ಮಿಕರ ಪರವಾಗಿ,

ಚೇತನ್ ಕುಮಾರ್ ಎಂ.ಎಸ್,
ಪ್ರವೀಣ್ ಕುಮಾರ್ ಎಚ್,
ರಾಘವೇಂದ್ರ ಎಚ್.

ಪರಮೇಶ್ ಎಂ.ಎ,
ಪ್ರಸನ್ನಕುಮಾರ್ ವಿ.ಕೆ
ಪ್ರತಾಪ್ ಎಸ್.

ಮೈಲಾರಪ್ಪ
ಹೊನ್ನಪ್ಪ ಎಸ್.ಪಿ

ರವಿಕುಮಾರ್ ಪಿ,
ಚಂದ್ರು ವಿ,

Scanned with OKEN Scanner